ಡಿ) ಈ ರೀತಿಯ ರಿಟ್ ಅರ್ಜಿಗಳು ಒಟ್ಟು ೩೭ ಬಾಕಿ ಇರುತ್ತವೆ.

ಇ) ಇಲ್ಲ.

ಶ್ರೀ ಕೆ. ಎಚ್. ಪಾಟೀಲ್.—ಮಾನ್ಯ ಜಾಲಪ್ಪನವರಿಂದ ಈ ಉತ್ತರ ಬಂದಿರುವುದನ್ನು ನೋಡಿ ನನಗೆ ಬಹಳ ಆಶ್ಚರ್ಯವಾಯಿತು. ಅವರು ಉತ್ತರದಲ್ಲಿ ೩೭ ರಿಟ್ ಅರ್ಜಿಗಳು ಹೈಕೋರ್ಟ್‌ನಲ್ಲಿ ಪೆಂಡಿಂಗ್ ಇವೆಯೆಂದು ಹೇಳಿದ್ದಾರೆ. ಇದಕ್ಕೆ ಮೊದಲೇ ಇನ್ನು ಎರಡ್ಮೂರು ತಿಂಗಳುಗಳಲ್ಲಿ ಪರಿಹಾರ ಮಾಡುತ್ತೇವೆಂದು ಆಶ್ವಾಸನೆಯನ್ನು ಕೊಟ್ಟಿದ್ದಾರೆ ಈಗಿರತಕ್ಕ ಕೇಡರ್ ಅಂಡ್ ರಿಕ್ರೂಟ್‌ಮೆಂಟ್ ರೂಲ್ಸ್‌ನಿಂದ ಕೆಲವರು ಅನ್ಯಾಯಕ್ಕೆ ಒಳಗಾಗಿದ್ದಾರೆ, ಕೆಲವರಿಗೆ ಪ್ರೊಮೋಷನ್ ಕೊಟ್ಟಿದ್ದಾರೆ. ಇದು ಈಗ ಕೊಟ್ಟಿರತಕ್ಕ ಉತ್ತರಕ್ಕೆ ತದ್ವಿರುದ್ಧವಾಗಿರುತ್ತದೆ. ತಾವು ಸಿನ್ಸಿಯರ್ ಆಗಿ ಕೆಲಸ ಮಾಡುತ್ತಿದ್ದೀರಿ ಎನ್ನುವ ಅನುಭವ ಇರುವುದರಿಂದ, ಈಗಲೂ ಈ ತಿಂಗಳ ಆಖೈರ್‌ನೊಳಗೆ ಕೇಡರ್ ಆಂಡ್ ರಿಕ್ರೂಟ್‌ಮೆಂಟ್ ರೂಲ್ಸ್ ಮಾಡಿ ಎಲ್ಲರಿಗೂ ನ್ಯಾಯ ಸಿಗುವಹಾಗೆ ಮಾಡುತ್ತೀರಾ ? ಅಥವಾ ಬೆಂಗಳೂರಿನ ಸುತ್ತಮುತ್ತ ಅಡ್ಡಾಡುವ ಜನರಿಗೆ ನ್ಯಾಯ ಸಿಗುವಹಾಗೆ ಮಾಡುವ ಇಚ್ಛಾ ನಿಮ್ಮಿದಾ ಇದೆಯೇ ?

ಶ್ರೀ ಆರ್. ಎಲ್. ಜಾಲಪ್ಪ.—ಮಾನ್ಯ ಸದಸ್ಯರು ಹೇಳಿದ್ದಕ್ಕೆ ನಾನು ವಿಷಾದಿಸುತ್ತೇನೆ. ಇದು ೧೯೭೭ರಿಂದ ಸರ್ಕಾರದ ಮುಂದಿದೆ. ಇದು ಯಾವಾಗಲೂ ಆಗಬೇಕಾಗಿತ್ತು ನಮ್ಮ ಅಧಿಕಾರಿಗಳ ಸೋಮಾರಿತನದಿಂದ ಆಗಿಲ್ಲ. ಬೆಂಗಳೂರಿನವರಿಗೆ ಪ್ರೊಮೋಷನ್ ಕೊಡಬೇಕೆಂದೇನೂ ಇಲ್ಲ. ರಾಜ್ಯದ ಹಿತದೃಷ್ಟಿಯಿಂದ, ಇಲಾಖೆಯಲ್ಲಿ ಅಧಿಕಾರಿಗಳು ಚೆನ್ನಾಗಿ ಕೆಲಸ ಮಾಡಬೇಕೆನ್ನುವ ದೃಷ್ಟಿಯಿಂದ ಯಾರಿಗೆಯಾರಿಗೆ ಏನೇನು ಕೊಡಬೇಕೋ ಅದನ್ನು ಕೊಡುವುದು ಧರ್ಮ. ಮಾನ್ಯ ಸದಸ್ಯರು ಸೂಚಿಸಿರುವ ಹಾಗೆ ಒಂದು ಒಂದೂವರೆ ತಿಂಗಳಿನಲ್ಲಿ ಅದನ್ನು ಫೈನಲೈಸ್ ಮಾಡುತ್ತೇನೆ ಎನ್ನುವ ಭರವಸೆಯನ್ನು ಕೊಡುತ್ತೇನೆ.

ಅಧ್ಯಕ್ಷರು.—ಪ್ರಶ್ನೆ ನಂ. ೨೫೧(೪೯೯) ಸದಸ್ಯರು ಹಾಜರಿಲ್ಲ

ಪ್ರಶ್ನೆ ನಂ. ೨೫೨(೫೪೮) ಸದಸ್ಯರು ಹಾಜರಿಲ್ಲ.

ಅಧಿಕಾರಿಗಳು ಮತ್ತು ಅಧಿಕಾರೇತರ ಸದಸ್ಯರನ್ನು ಸಹಕಾರ ಸಂಘಗಳಿಗೆ ನಿರ್ದೇಶಕರುಗಳನ್ನಾಗಿ ನೇಮಿಸುವ ಬಗ್ಗೆ.

೨೧೪. ಶ್ರೀ ವೀರಯ್ಯ ಸ್ವಾಮಿ (ಚಿಂಚೋಳಿ).— ಮಾನ್ಯ ಸಹಕಾರ ಸಚಿವರು ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

(ಅ) ಸಹಕಾರಿ ಸಂಘ ಸಂಸ್ಥೆಗಳಿಗೆ ಅಧಿಕಾರಿಗಳನ್ನು ಮತ್ತು ಅಧಿಕಾರೇತರ ಜನರನ್ನು ಆಡಳಿತ ಮಂಡಳಿಗಳಿಗೆ ನಾಮ ನಿರ್ದೇಶನ ಮಾಡುವುದಕ್ಕೋಸ್ಕರ ಸರ್ಕಾರ ಏನಾದರೂ ನಿಯಮಗಳನ್ನು ರಚಿಸಿದೆಯೇ ?

(ಆ) ಸರ್ಕಾರದಿಂದ ನಾಮ ನಿರ್ದೇಶಿತರಾದ ಡೈರೆಕ್ಟರುಗಳು ಸಹಕಾರಿ ಸಂಘಗಳ ಚುನಾವಣೆಗಳಲ್ಲಿ ಸಕ್ರಿಯವಾಗಿ ಪಾತ್ರವಹಿಸುತ್ತಿರುವರೇ ? ಮತ್ತು ಇಂಥ ನಾಮ ನಿರ್ದೇಶನಗಳು ಸಹಕಾರ ಸಂಘಗಳಲ್ಲಿ ಚುನಾಯಿತ ಡೈರೆಕ್ಟರುಗಳ ಬಹುಮತವಿಲ್ಲದಿದ್ದರೂ ಸಹ ಕೆಲವು ರಾಜಕೀಯ ಪಕ್ಷಗಳಿಗೆ ಸಹಕಾರ ಸಂಘಗಳ ಅಧಿಕಾರ ಗಳಿಸಿಕೊಳ್ಳುವುದಕ್ಕೆ ಅನುಕೂಲ ಮಾಡಿಕೊಟ್ಟಂತಾಗುತ್ತದೆಂಬ ವಿಷಯ ಸರ್ಕಾರದ ಗಮನಕ್ಕೆ ಬಂದಿರುತ್ತದೆಯೇ ?

(ಇ) ಇದು ಅಸಂಸದೀಯ ಕ್ರಮವೆಂದು ಸರ್ಕಾರಕ್ಕೆ ಅನಿಸಂತಿಲ್ಲವೇ ? ಮತ್ತು ಇಂಥ ರೂಢಿಯನ್ನು ನಿಲ್ಲಿಸಲು ಕ್ರಮ ತೆಗೆದುಕೊಳ್ಳುವುದೇ ?

ಶ್ರೀ ಆರ್. ಎಲ್. ಜಾಲಪ್ಪ (ಸಹಕಾರ ಮಂತ್ರಿಗಳು).—

(ಅ) ಸಂಸ್ಥೆಗೆ ನೇಮಕ ಹೊಂದುವ ನಿರ್ದೇಶಕರು ಉತ್ತಮ ಕೊಡುಗೆ ಸಲ್ಲಿಸುವ ಸಾಮರ್ಥ್ಯವಂತರಾಗಿರಬೇಕು. ಹಾಗೂ ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ ೧೯೫೯ ಕಲಂ ೨೯ 'ಸಿ' ಆಡಿಯಲ್ಲಿನ ಉಲ್ಲೇಖಿತ ಅನರ್ಹತೆಗಳನ್ನು ಹೊಂದಿರಕೂಡದು. ರೂಢಿಯಲ್ಲಿರುವಂತೆ ಸಹಕಾರ ಸಂಘಗಳ ಚುನಾವಣೆಗಳಲ್ಲಿ ಪರಾಭವಗೊಂಡ ವ್ಯಕ್ತಿಗಳನ್ನು ಅದೇ ಸಂಸ್ಥೆಗೆ ನಾಮಕರಣ ಮಾಡುತ್ತಿಲ್ಲ.

(ಆ) ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ ೧೯೫೯ರ ಕಲಂ ೨೯ ಮತ್ತು ೫೩ (ಎ) ಪ್ರಕಾರ ಹಾಗೂ ಸಂಘದ ಉಪ ಕಾನೂನು ಗಳಿಗನುಸಾರವಾಗಿ ನಿರ್ದೇಶಕರ ಮಂಡಳಿಗೆ ಸರ್ಕಾರದ ಪ್ರತಿನಿಧಿಗಳನ್ನು ನಾಮನಿರ್ದೇಶನ ಮಾಡಲಾಗುವುದು. ಸಾಮಾನ್ಯವಾಗಿ ಅಂತಹ ಸಹಕಾರಿ ಸಂಘಗಳು ಸರ್ಕಾರದ ಆರ್ಥಿಕ ನೆರವು, ಅಂದರೆ ಪಾಲು ಬಂಡವಾಳ ಸಾಲ ಇತ್ಯಾದಿಗಳನ್ನು ಪಡೆದುಕೊಂಡಿರುತ್ತವೆ. ಇಂಥಹ ಸಂಘಗಳಲ್ಲಿ ಸರ್ಕಾರದ ಹಿತಸಂರಕ್ಷಿಸುವುದು ನಾಮ ನಿರ್ದೇಶಿತರ ಜವಾಬ್ದಾರಿಯಾಗಿರುತ್ತದೆ. ನಾಮ ನಿರ್ದೇಶಿತರಲ್ಲಿ ಪ್ರತಿನಿಧಿಗಳು ಚುನಾವಣೆಗಳಲ್ಲಿ ಭಾಗವಹಿಸಲು ನಿಷೇದಿಸುವಂತ ಉಪಬಂಧಗಳು ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ ೧೯೫೯ರಲ್ಲಿ ಇರುವುದಿಲ್ಲ, ಈ ನಿರ್ದೇಶಕರು ಸರ್ಕಾರದಿಂದ ನಿರ್ದೇಶಿತರಾಗಿರುವುದರಿಂದ ಸಂಘದ ಸರ್ವಾಂಗೀಣ ಹಿತದೃಷ್ಟಿ, ಸಂರಕ್ಷಿಸುವಲ್ಲಿ ಸರ್ಕಾರದ ಆದೇಶ ಗಳನ್ವಯ ಚುನಾವಣೆ ಹಾಗೂ ಇತರೆ ವಿಷಯಗಳಲ್ಲಿ ಪಾತ್ರವಹಿಸುವುದು ಅವರ ಪರಮ ಕರ್ತವ್ಯ.

(ಇ) ಭಾಗ (ಆ)ದಲ್ಲಿ ಉತ್ತರಿಸಿರುವ ಹಿನ್ನಲೆಯಲ್ಲಿ ಅಸ್ತಿತ್ವದಲ್ಲಿರುವ ಉಪಬಂಧಗಳ ಹಾಗೂ ಬಹಳ ದೀರ್ಘಕಾಲದಿಂದ ರೂಢಿಯಲ್ಲಿರುವುದರಿಂದ ಇದನ್ನು ಅಸಂಸದೀಯವೆಂದು ಕರೆಯುವಂತಿಲ್ಲ.

ಶ್ರೀ ವೀರಯ್ಯಸ್ವಾಮಿ.—ಮಾನ್ಯ ಮಂತ್ರಿಗಳು ಹೇಳಿರುವ ಉತ್ತರದಲ್ಲಿ ನಿಯಮಗಳನ್ನು ಪಾಲಿಸಲಾಗುತ್ತದೆಂದು ಹೇಳಿದ್ದಾರೆ. ಉತ್ತರದಲ್ಲಿ ಯಾವುದೇ ನಿರ್ದಿಷ್ಟವಾದ ನಿಯಮ ಇಲ್ಲವೆನ್ನುವ ಅರ್ಥಬರುತ್ತದೆ. ಉತ್ತರದಲ್ಲಿ ಒಂದು ಮಾತು ಹೇಳಿದ್ದಾರೆ "ಉತ್ತಮ ಕೊಡುಗೆ ಸಲ್ಲಿಸುವ ಸಾಮರ್ಥ್ಯವಂತರಾಗಿರಬೇಕು" ಸಮರ್ಥರು ಎಂದರೆ ಯಾವರೀತಿಯ ಸಮರ್ಥರು ಯಾವ ಆಳತೆಗೋಲಿನ ಮೇಲೆ ಸಮರ್ಥರನ್ನು ನಿರ್ಧರಿಸುತ್ತೀರಿ ಅದನ್ನು ಹೇಳಬೇಕು ? ವಿಶೇಷವಾಗಿ ನಾನು ಪ್ರಶ್ನೆ ಕೇಳಿದ ಮೂಲ ಉದ್ದೇಶ ಏನೆಂದರೆ ನೀವು ಎಲ್ಲಾ ಕಡೆಗೂ ನೇಮಕ ಮಾಡಿರತಕ್ಕ ಡೈರೆಕ್ಟರುಗಳು ಏನಿದ್ದಾರೆ ಅವರು ನಿಮ್ಮ ಪಕ್ಷಕ್ಕೆ ಸೇರಿದವರಾಗಿದ್ದಾರೆ, ಚುನಾವಣೆಗಳಲ್ಲಿ ಸೋತವರಿಗೆ ಸ್ಥಾನವನ್ನು ಕೊಟ್ಟಿದ್ದೀರಿ ಇದರ ಮೂಲ ಉದ್ದೇಶವೇನು ?

ಶ್ರೀ ಆರ್. ಎಲ್. ಜಾಲಪ್ಪ.—ಸಹಕಾರ ಸಂಸ್ಥೆಗಳ ಬಗ್ಗೆ ಮತ್ತು ಸಹಕಾರ ಆಂದೋಳನದ ಬಗ್ಗೆ ಯಾರುಯಾರಿಗೆ ನಂಬಿಕೆ ಇದೆ ಅಂಥವರಿಗೆ ನಾವು ನಿರ್ದೇಶನ ಮಾಡುತ್ತಿದ್ದೇವೆ. ನಾವು ಒಬ್ಬರೇ ಮಾಡುತ್ತಿಲ್ಲ ಇಡೀ ರಾಷ್ಟ್ರದಲೇ ಮಾಡುತ್ತಿದ್ದಾರೆ. ಕೇಂದ್ರ ಸರ್ಕಾರದ ಸಹಕಾರಕ್ಕಾಗಿ ರೂಲ್ ೪೧ರ ಕಡೆಗೆ ತಮ್ಮ ಗಮನ ಸೆಳೆಯಬಯಸುತ್ತೇನೆ.

> "41. (1) Where the Central Government or a State Government has subscribed to the share capital of a Multi-State Co-operative society or has guaranteed the repayment of principal and payment of interest on debentures issued by a multi-state co-operative society or has guaranteed the repayment of principal and payment of interest on loans and advances to a mutli-State co-operative society, the Central Government or the State Government in this behalf, as the case may be, or any person authorised by the Central Government, or the State Government, shall have the right to nominate on the board such number of persons as may be prescribed."

In addition to this, Mr. Speaker Sir, Clause 41(2) reads thus :

"The bye-laws of a mutli state co-operative society may provide for the nomination of persons in excess of the limits prescribed under sub-section(1)"

ನಮ್ಮದು ಹೊಸದೇನಲ್ಲ. ಇನ್ನೂ ಹೇಳುವುದಾದರೆ ರಾಷ್ಟ್ರಮಟ್ಟದಲ್ಲಿ ನಫೆಡ್, ಕ್ರಿಬ್ಕೋ ಮತ್ತು ಇಫ್ಕೋ ಈ ಮೂರು ಸಂಸ್ಥೆಗಳಿಗೆ ನಾಮಿನೇಟೆಡ್ ಡೈರೆಕ್ಟರ್ಸ್ ಮಾಡಿ ಅವರನ್ನು ಅಧ್ಯಕ್ಷರನ್ನಾಗಿ ಮಾಡಿದ್ದಾರೆ. ಇದನ್ನು ಗಮನದಲ್ಲಿಟ್ಟು ಕೊಂಡಾಗ ನಾವು ಮಾಡುವುದು ಹೊಸದೇನಲ್ಲ. ಸೋತವರಿಗೆ ಕೊಟ್ಟಿದ್ದೇವೆಂದು ಮಾನ್ಯ ಸದಸ್ಯರು ಹೇಳಿದರಂ. ಕೆಲವರಿಗೆ ಕೊಟ್ಟಿದ್ದೇವೆ. ರಾಜಕೀಯ ಇಲ್ಲ ವೆಂದು ಅಲ್ಲ. ರಾಜಕೀಯ ಇದೆ ಎಂಬುದನ್ನು ಹಿಂದೆ ಕೂಡ ಒಪ್ಪಿಕೊಂಡಿದ್ದೇನೆ. ಆದರಲ್ಲಿ ಹಿಂದಂ ಮುಂದು ನೋಡುವು ದಿಲ್ಲ.

ಶ್ರೀ ಕೆ. ಹೆಚ್. ಪಾಟೀಲ್ —ರಾಜಕೀಯ ಇರಲಿ. ನಿಮ್ಮಲ್ಲಿ ಬೇಕಾದವರು ಸಿಗದಿದ್ದರೆ ಅಂಥ ವರನ್ನು ನೇಮಿಸಿ. ಚಂದ್ರಾರಾವ್ ಪಾಟೀಲ್ ಚಿಂಚೋಳಿ ಅವರನ್ನು ಗುಲ್ಬರ್ಗ ಸೆಂಟ್ರಲ್ ಬ್ಯಾಂಕಿನ ಅಧ್ಯಕ್ಷರನ್ನಾಗಿ ಮಾಡಿದ್ದೀರಿ. ಅವರು,[ಈ ಪ್ರಶ್ನೆ ಕೇಳಿರತಕ್ಕ ಸದಸ್ಯರಿಗೆ ಸೋತವರು ಸೋತವರು ಅಷ್ಟೇ ಅಲ್ಲ, ಚಿಂಚೋಳಿ ಟಿವಿಸಿಸಿಎಂಎಸ್.ನಲ್ಲಿ ಡಿಫಾಲ್ಟರ್ ಆಗಿದ್ದರು. ಸೋತಿದ್ದರೂ ಪರವಾಗಿಲ್ಲ, ಡಿಫಾಲ್ಟರ್ ಮಾತ್ರ ಆಗಿರಬಾರದು. ಅವರ ಬಗ್ಗೆ ಚುನಾವಣಾಧಿಕಾರಿಗಳು ಓವರ್ ರೂಲ್ ಮಾಡಿದ್ದಾರೆಂದು ಆಕ್ಷೇಪಣೆ ಮಾಡಿದರೂ ಅವರನ್ನು ಆ ಬ್ಯಾಂಕಿನ ಅಧ್ಯಕ್ಷರನ್ನಾಗಿ ನೇಮಿಸುವುದಕ್ಕೆ ನಿಮಗೆ ಯಾವ ಅಧಿಕಾರ ಇದೆ ?

ಶ್ರೀ ಆರ್. ಎಲ್. ಜಾಲಪ್ಪ —ಇವರ ಎದುರು ನಿಂತು ಸೋತರುಎಂದರೆ ಡಿಸ್‌ಕ್ವಾಲಿಫಿಕೇಷನ್ ಆಗುವುದಿಲ್ಲ. ಬ್ಯಾಂಕಿನ ಚುನಾವಣೆಯಲ್ಲಿ ಸೋತಿದ್ದರೆ ಡೈರೆಕ್ಟರನ್ನಾಗಿ ಮಾಡುವುದಕ್ಕೆ ಬರುವುದಿಲ್ಲ. ಡೀಫಾಲ್ಟರನ್ನು ನಾಮಿನೇಟ್ ಮಾಡಿದ್ದಾರೆಂದು ಹೇಳಿದ್ದಾರೆ. ಆ ಬಗ್ಗೆ ಡೆಪ್ಯೂಟಿ ರಿಜಿಸ್ಟ್ರಾರ್‌ರವರಿಗೆ ೩ ಸಾರಿ ಮೂರುತರಹ ಬರೆದ, ಕಳುಹಿಸಿದ್ದೇನೆ. ಡೀಫಾಲ್ಟರ್ ಇದ್ದರೆ ರಿಮೂವ್ ಮಾಡಿ ಎಂದು ಹೇಳಿದ್ದೇನೆ. ಇನ್ನು ೨-೩ ದಿನಗಳಲ್ಲಿ ಇದನ್ನು ನೋಡಿ ಇನ್ನೂ ಅವರು ಡೀಫಾಲ್ಟರ್ ಆಗಿದ್ದರೆ ಖಂಡಿತ ಅವರನ್ನು ಆ ಸ್ಥಾನದಿಂದ ತೆಗೆದುಹಾಕಿಸುತ್ತೇನೆ.

ಶ್ರೀ ಕೆ. ಹೆಚ್. ಪಾಟೀಲ್. —ಇನ್ನೂ ಡೀಫಾಲ್ಟರ್ ಆಗಿದ್ದರೆ ಎಂಬುದು ಅಲ್ಲ. ಮಂತ್ರಿಗಳಿಂದ ಆದೇಶ ಹೋದಮೇಲೆ ಅವರ ಕಡೆಯಿಂದ ಹಣ ತುಂಬಿಸಿಕೊಂಡಿದ್ದಾರೆ. ಅವರಂ ಹಣ ತುಂಬಿರುವುದಂ ದೊಡ್ಡ ಮಾತಲ್ಲ. At the time of the election ಚುನಾವಣೆ ಸಂದರ್ಭದಲ್ಲಿ ಅವರು ಡೀಫಾಲ್ಟರ್ ಆಗಿದ್ದರು ಎಂಬುದು ಖಾತ್ರಿಯಾದರೆ ಅವರನ್ನು ತೆಗೆದಂ ಬೇರೆ ನಿಮ್ಮವರನ್ನೇ ನೇಮಿಸಿ. ನಾವು ಬೇಡ ಅನ್ನುವುದಿಲ್ಲ.

ಶ್ರೀ ಆರ್. ಎಲ್. ಜಾಲಪ್ಪ.—ಆಗಬಹುದಂ.

ಅಧ್ಯಕ್ಷರು.—ಡಿಸ್‌ಕ್ವಾಲಿಫೈಡ್ ಆದಂತಹ ಅಭ್ಯರ್ಥಿಗಳನ್ನು ನಾಮಿನೇಟ್ ಮಾಡಬಾರದು.

ರೆಗ್ಯುಲೇಟೆಡ್ ಮಾರ್ಕೆಟ್ ಸಮಿತಿಗಳಿಗೆ ಸಂಬಂಧಿಸಿದ ಹಣದ ವೆಚ್ಚದ ಬಗ್ಗೆ.

೯೬೬. ಶ್ರೀ ಮಲ್ಲಾರ ಗೌಡ ಎಸ್. ಪಾಟೀಲ್ (ಸಂಕೇಶ್ವರ),—ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೆ ?

ಅ) ರೆಗ್ಯುಲೇಟೆಡ್ ಮಾರ್ಕೆಟ್ ಸಮಿತಿಗಳಿಗೆ ಸಂಬಂಧಿಸಿದ ಹಣವನ್ನು ಉದ್ದೇಶಿತ ಬಾಬಿಗೆ ಖರ್ಚು ಮಾಡದೆ ಇತರೆ ಬಾಬುಗಳಿಗೆ ಹಣವನ್ನು ವರ್ಗಾವಣೆ ಮಾಡಿರುವುದು ನಿಜವೇ ?

ಆ) ಹಾಗಿದ್ದಲ್ಲಿ ಆ ರೀತಿ ವರ್ಗಾವಣೆ ಮಾಡಿರುವ ಹಣವೆಷ್ಟು ?

ಇ) ಈ ವರ್ಗಾವಣೆಗೆ ಸರ್ಕಾರದವರು ಆದೇಶವನ್ನೇನಾದರೂ ನೀಡಿರುವರೇ ?

ಈ) ಹಾಗಿದ್ದಲ್ಲಿ ವರ್ಗಾವಣೆ ಮಾಡಲಂತಹ ಸಂದರ್ಭಗಳೇನು ?